# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು- 570 006

ಸಂಖ್ಯೆ: ಕರಾಮುವಿ/ಐಸಿಟಿ/ಇ-ಆಫೀಸ್/01/2020

ದಿನಾಂಕ: 05.10.2020

**ಸುತ್ತೋಲೆ**

ವಿಷಯ: ವಿವಿ ನಿಲಯದ ಅಧಿಕಾರಿ ಸಿಬ್ಬಂದಿಗಳ ಮೊಬೈಲ್ ಸಂಖ್ಯೆಗೆ ಬಂದಿರುವ ಇ-ಆಫೀಸ್‌ನ ಲಾಗಿನ್ ಐ.ಡಿ ಮತ್ತು ಪಾಸ್‌ವರ್ಡ್‌ಗಳ ಬಗೆಗೆ.

*****

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಇ-ಆಫೀಸ್ ತಂತ್ರಾಂಶದ ಅನುಷ್ಠಾನವನ್ನು ಕಡ್ಡಾಯಗೊಳಿಸಿದ್ದು, ಅದರಂತೆ, ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸುವ ಸಂಬಂಧ ಈಗಾಗಲೇ ವಿಶ್ವವಿದ್ಯಾನಿಲಯದ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ Demo Version ನಲ್ಲಿ ತರಬೇತಿಯನ್ನು ನೀಡಲಾಗಿದ್ದು, ಇ-ಆಫೀಸ್ ವತಿಯಿಂದ ತಂತ್ರಾಂಶದ ಬಳಕೆಗಾಗಿ ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿ ಹಾಗೂ ಲಿಪಿಕ ವರ್ಗದ ಸಿಬ್ಬಂದಿಗಳಿಗೆ ಪ್ರತ್ಯೇಕ Login ID ಮತ್ತು Password ಗಳನ್ನು ಆಯಾಯ ಅಧಿಕಾರಿ ಹಾಗೂ ಲಿಪಿಕ ವರ್ಗದ ಸಿಬ್ಬಂದಿಗಳ ಮೊಬೈಲ್ ಸಂಖ್ಯೆಗೆ VK-EFORMS ಹೆಸರಿನ ಮೂಲಕ ಎಸ್.ಎಂ.ಎಸ್. ರವಾನಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಎಲ್ಲಾ ಅಧಿಕಾರಿ ಮತ್ತು ಎಲ್ಲಾ ಲಿಪಿಕ ವರ್ಗದ ಸಿಬ್ಬಂದಿಗಳು ತಮ್ಮ ಮೊಬೈಲ್ ಸಂಖ್ಯೆಗೆ ಬಂದಿರುವ Login ID ಮತ್ತು Password ಅನ್ನು ಗೌಪ್ಯವಾಗಿ ಕಾಪಾಡಿಕೊಳ್ಳುವುದು. ಮುಂದುವರೆದು, ಇ-ಆಫೀಸ್ ಅನುಷ್ಠಾನದ ನಂತರದಲ್ಲಿ ಪ್ರಸ್ತುತ ಎಸ್.ಎಂ.ಎಸ್. ಮೂಲಕ ನೀಡಿರುವ Login ID ಯಿಂದಲೇ ಕಾರ್ಯನಿರ್ವಹಿಸಬೇಕಿದ್ದು, Password ಅನ್ನು ಬದಲಾವಣೆ ಮಾಡಿಕೊಳ್ಳಬಹುದಾಗಿರುತ್ತದೆ.

ಮೇಲಿನ ಮಾಹಿತಿಯನ್ನು ಆಯಾ ವಿಭಾಗದ ಮುಖ್ಯಸ್ಥರು ತಮ್ಮ ವಿಭಾಗದ ಎಲ್ಲಾ ಲಿಪಿಕ ವರ್ಗದ ಸಿಬ್ಬಂದಿಗಳ ಗಮನಕ್ಕೆ ತರುವುದು. ಮುಂದುವರೆದು, ಯಾವುದಾದರೂ ಅಧಿಕಾರಿ / ಲಿಪಿಕ ವರ್ಗದ ಖಾಯಂ ಹಾಗೂ ತಾತ್ಕಾಲಿಕ ಸಿಬ್ಬಂದಿಗಳಿಗೆ ಎಸ್.ಎಂ.ಎಸ್. ಬಂದಿಲ್ಲದಿದ್ದಲ್ಲಿ ಅಂತಹ ಸಿಬ್ಬಂದಿಗಳ ಮಾಹಿತಿಯನ್ನು ಐ.ಸಿ.ಟಿ. ವಿಭಾಗಕ್ಕೆ ತುರ್ತಾಗಿ ಒದಗಿಸುವಂತೆ ತಿಳಿಸಿದೆ.

ಕುಲಸಚಿವ

ಪ್ರತಿ,

1. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
2. ಎಲ್ಲಾ ಅಧ್ಯಯನ ವಿಭಾಗದ ಮುಖ್ಯಸ್ಥರು, ಕರಾಮುವಿ, ಮೈಸೂರು
3. ಎಲ್ಲಾ ಅಧ್ಯಯನ ಪೀಠಗಳ ಮುಖ್ಯಸ್ಥರು, ಕರಾಮುವಿ, ಮೈಸೂರು
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕರಾಮುವಿ, ಮೈಸೂರು.
5. ಎಲ್ಲಾ ಉಪಕುಲಸಚಿವರು / ಸಹಾಯಕ ಕುಲಸಚಿವರು, ಕರಾಮುವಿ, ಮೈಸೂರು.
6. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
7. ಕುಲಸಚಿವರ ಆಪ್ತಶಾಖೆ, ಕರಾಮುವಿ, ಮೈಸೂರು.
8. ಕಛೇರಿ ಪ್ರತಿ